# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಸ್ಪೇಷಲ್ ಕೇಸ್ ನಂ.66/2021

ಪ್ರಾ.ಸಾ. 1

ಚಾ.ಸಾ. 1

## ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 14.08.2024

| | |
|---|---|
| ಸಾಕ್ಷಿದಾರರ ಹೆಸರು | ವೆಂಕಟಾಚಲ |
| ತಂದೆಯ ಹೆಸರು | ಚಿನ್ನಯ್ಯ |
| ವಯಸ್ಸು | 42 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಸೀನಪ್ಪನದೊಡ್ಡಿ ಗ್ರಾಮ |

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ

1. ನಾನು ಪರಿಶಿಷ್ಟ ಜಾತಿ ಬೋವಿ ಜನಾಂಗಕ್ಕೆ ಸೇರಿದವನು. ಚಾಸಾ.4 ನನ್ನ ತಾಯಿ. ಚಾಸಾ.5 ನನ್ನ ಹೆಂಡತಿ, ಚಾಸಾ.2 ಹಾಗೂ 3, 6 ರಿಂದ 10 ಗೊತ್ತು. ಅವರು ನಮ್ಮ ಗ್ರಾಮದವರು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಅವರು ನಮ್ಮ ಗ್ರಾಮದವರು. ಅವರು ಒಕ್ಕಲಿಗ ಜನಾಂಗದವರು. ನಾವು ಬೋವಿ ಜನಾಂಗಕ್ಕೆ ಸೇರಿದ್ದೇವೆಂಬ ವಿಷಯ ಆರೋಪಿತರಿಗೆ ಮೊದಲಿನಿಂದಲೂ ಗೊತ್ತು.

2. ಸುಮಾರು ಮೂರು ಮುಕ್ಕಾಲು ವರ್ಷದ ಹಿಂದೆ ನಿಲುವಾಗಿಲು ಗ್ರಾಮ ಪಂಚಾಯಿತಿ ಚುನಾವಣೆ ಸಂಬಂಧ ಚಾಸಾ.6 ಹಾಗೂ 7 ರವರ ಪರವಾಗಿ ನಾನು, ಸುಮಾರು 20

ಜನರು ಆರೋಪಿತರ ಮನೆಗೆ ಹೋಗಿ ಮತ ಕೇಳಿದೆವು ಆ ಸಮಯದಲ್ಲಿ ಆರೋಪಿತರ ತಂದೆ ತಾಯಿ ಮನೆಯಲ್ಲಿ ಇದ್ದರು. ಓಟು ಹಾಕುತ್ತೇವೆ ಹೋಗಿ ಎಂದು ಹೇಳಿದರು.

3. ನಂತರ ಮರುದಿವಸ ಸಾಯಂಕಾಲ 5.30 ಗಂಟೆ ಸಮಯಕ್ಕೆ ಇಬ್ಬರು ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ನನ್ನ ಮನೆಯ ಹತ್ತಿರ ನನ್ನ ತಾಯಿ ತಂದೆಗೆ ಕೇಳಲು ಏಕೆಹೋಗಿದ್ದೆ ಬೋಳಿ ಮಗನೇ, ಸೂಳೇ ಮಗನೇ, ವಡ್ಡಾ ನನ್ನ ಮಗನೇ ಎಂದು ಅವ್ಯಾಚ ಶಬ್ಧದಿಂದ ಜಾತಿ ಹಿಡಿದು ಬೈದರು. 1 ನೇ ಆರೋಪಿ ನನ್ನ ಶರ್ಟ್ಟ್ ಕತ್ತಿನ ಪಟ್ಟಿ ಹಿಡಿದು ಎಳೆದಾಡಿ, ಚಾಕುವಿನಿಂದ ನನ್ನ ಕೈಗಳಿಗೆ ಗೀಚಿದನು, 2 ನೇ ಆರೋಪಿ ಚಪ್ಪಲಿ ಕಾಲಿನಿಂದ ನನಗೆ ಒದ್ದು, ನನ್ನ ಬಟ್ಟೆಯನ್ನು ಎಳೆದಾಡಿ ಹರಿದು ಹಾಕಿದನು. ಅಷ್ಟರಲ್ಲಿ ಚಾಸಾ.2 ರಿಂದ 5 ರವರು ಬಂದು ಜಗಳ ಬಿಡಿಸಿದರು. ಆ ಸಮಯದಲ್ಲಿ ಇಬ್ಬರೂ ಆರೋಪಿತರು ಇನ್ನೊಮ್ಮೆ ಸಿಗು ನಿನಗೆ ಒಂದು ಗತಿ ಕಾಣಿಸುತ್ತೇನೆ, ಊರು ಬಿಟ್ಟು ಓಡಿಸುತ್ತೇವೆಂದು ಬೆದರಿಕೆ ಹಾಕಿ ಓಡಿಹೋದರು. ಆರೋಪಿತರು ನನಗೆ ಹಲ್ಲೆ ಮಾಡಿದ್ದರಿಂದ ನನ್ನ ಕೈಗಳಿಗೆ, ಮೈಮೇಲೆ ಏಟು ಆಯಿತು.

4. ನಾನು ಮದ್ದೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ಆಸ್ಪತ್ರೆಗೆ ಬಂದಾಗ ವೈದ್ಯರ ಸಮಕ್ಷಮ ಹೇಳಿಕೆ ಪಿರ್ಯಾದನ್ನು ಕೊಟ್ಟಿದ್ದೇನೆ. ನನ್ನ ಹೇಳಿಕೆ ಪಿರ್ಯಾದನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಗಿದೆ.

5. ದೂರು ಕೊಟ್ಟ ನಂತರ ಮರುದಿವಸ ಪೊಲೀಸರು ಚಾಸಾ.9 ಹಾಗೂ 10 ಇವರನ್ನು ಕರೆದುಕೊಂಡು ಮೇಲೆ ತಿಳಿಸಿದ ಸೀನಪ್ಪನದೊಡ್ಡಿ ಗ್ರಾಮದಲ್ಲಿರುವ ನನ್ನ ಮುಂದೆ ಘಟನಾ ಸ್ಥಳವನ್ನು ನಾನು ತೋರಿಸಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ್ದಂತಹ ಚಾಕು, ಒಂದು ಬಲಗಾಲಿನ ಹವಾಯ್ ಚಪ್ಪಲಿ, ಕರಪತ್ರ ಹಾಗೂ ಕೃತ್ಯದ ಸಮಯದಲ್ಲಿ ನಾನು ಧರಿಸಿದ್ದನಂತಹ ಶರ್ಟ್ ಇವುಗಳನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಅಮಾನತ್ತುಪಡಿಸಿಕೊಂಡು ವಿವರವಾದ ಮಹಜರನ್ನು ಬೆಳಗ್ಗೆ 8.30 ರಿಂದ 9.30 ಗಂಟೆವರೆಗೆ ಮಾಡಿ ಸ್ಥಳದಲ್ಲಿ ಪೊಟೋ ತೆಗೆದರು. ಮಹಜರ್ ನೋಡುತ್ತಿದ್ದು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಗಿದೆ. ಪೊಟೋವನ್ನು ನಿಪಿ.3 ಎಂದು ಗುರುತಿಸಲಾಗಿದೆ. ಜಪ್ತಾದ ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ಕರಪತ್ರ ನಿಪಿ.4 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ ಚಾಕುವನ್ನು ಮು.ಮಾ.1, ಚಪ್ಪಲಿ ಮು.ಮಾ.2, ನನ್ನ ಹರಿದ ಶರ್ಟ್ ಮು.ಮಾ.3 ಎಂದು

ಗುರುತಿಸಲಾಗಿದೆ. ಗಲಾಟೆ ಮಾಡಿದಂತಹ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳು ಆಗಿರುತ್ತಾರೆ. ಘಟನೆ ಬಗ್ಗೆ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.